ಸಾಕ್ಷಿಯನ್ನು 07.12.2022 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. **ಪಿ.ಡಬ್ಲ್ಯೂ-1**

ಪಾಟೀ ಸವಾಲುঃ 2 ನೇ ಪ್ರತಿವಾದಿಪರ ವಕೀಲರಿಂದಃ

**1.** ನನಗೆ ಕನ್ನಡ ಅರ್ಥ ಆಗುತ್ತೆ. ನನ್ನ ತಾತನ ಹೆಸರು ಕೆಂಚಯ್ಯ. ಅವರಿಗೆ ಕೊದಲಯ್ಯ ಎಂಬ ಹೆಸರು ಕೂಡ ಇತ್ತು. ನಮ್ಮ ಪೂರ್ವಜರು ಕರ್ನಾಟಕದವರು. ನನ್ನ ತಾತ 10 ಎಕರೆ ಜಮೀನನ್ನು ಹೊರತುಪಡಿಸಿ ಒಂದು ಮನೆಯನ್ನು ಹೊಂದಿದ್ದರು. ನನ್ನ ತಂದೆ ದಾವಾ ಷೆಡ್ಯೂಲ್ ಆಸ್ತಿ ಐಟಂ ನಂ.1 ನ್ನು ಮತ್ತು 2 ನ್ನು , ಹಾಗೂ ಸರ್ವೆ ನಂ.94/2 ಎ೯ ರಲ್ಲಿ 24 ಗುಂಟೆ ಜಮೀನು ನನ್ನ ತಂದೆಯ ಭಾಗಕ್ಕೆ ಬಂದಿತ್ತು. ದಾವಾ ಆಸ್ತಿ ಐಟಂ ನಂ.1 ನನ್ನ ತಂದೆ ಮಾದಯ್ಯನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 10 ಕ್ರಯಪತ್ರ ದಿಃ 17.07.1984 ಇದನ್ನು ತೋರಿಸಲಾಗಿ ಸದರಿ ಕ್ರಯಪತ್ರದಲ್ಲಿ ದಾವಾ ಶೆಡ್ಯೂಲ್ ಆಸ್ತಿ ಐಟಂ ನಂ.1 ನ್ನು ತನ್ನ ತಂದೆ ಕ್ರಯಪತ್ರ ದಲ್ಲಿ ಕೊಂಡುಕೊಂಡಿದ್ದಾರೆ ಎಂದರೆ ಸರಿ ಎಂದು ನುಡಿದಿದ್ದಾರೆ. ನನ್ನ ತಾತನಿಗೆ ಒಟ್ಟು 3 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದರು. ಅವರ ಹೆಸರುಗಳು ಮಾದಯ್ಯ , ಬೋರಯ್ಯ , ಮಾಯಣ್ಣ , ಹುಚ್ಚಮ್ಮ ಮತ್ತು ನಂಜಮ್ಮ. ಸಾಕ್ಷಿಗೆ ನಿಪಿ 1 ವಂಶವೃಕ್ಷವನ್ನು ತೋರಿಸಲಾಗಿ ಅದರಲ್ಲಿ ಕೆಂಚಯ್ಯ ಅಲಿಯಾಸ್ ಕೊದಲಯ್ಯನವರ ಹೆಣ್ಣುಮಕ್ಕಳ ಹೆಸರುಗಳನ್ನು ತೋರಿಸಿಲ್ಲ ಎಂದರೆ ಸರಿ ಎಂದು ನುಡಿದಿದ್ದಾರೆ. ಸಾಕ್ಷಿಗೆ ನಿಪಿ 9 ನ್ನು ತೋರಿಸಲಾಗಿ ಸದರಿ ಕ್ರಯಪತ್ರವನ್ನು ಜಯಮ್ಮ ನವರಿಗೆ ಕೆಂಚಯ್ಯನ ಮಗ ಮಾಯಣ್ಣರವರು ಸರ್ವೆ ನಂ. 94/1 ಎ ವಿಸ್ತೀರ್ಣ 20 ಗುಂಟೆಗೆ ಸಂಬಂಧಪಟ್ಟಂತೆ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಕೆ. ಮಾಯಣ್ಣ ಎಂದರೆ ನನ್ನ ದೊಡ್ಡಪ್ಪ. ಸರ್ವೆ ನಂ.94/1 ಎ ವಿಸ್ತೀರ್ಣ 20 ಗುಂಟೆ ನನ್ನ ದೊಡ್ಡಪ್ಪ ಮಾಯಣ್ಣರವರಿಗೆ ವಿಭಾಗದಲ್ಲಿ ಬಂದಿತ್ತು ಎಂದರೆ ಸರಿ. ಸದರಿ ವಿಚಾರವನ್ನು ನಾನು ನನ್ನ ವಾದಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾದಪತ್ರವನ್ನು ಇಂಗ್ಲಿಷ್ ಭಾಷೆಯಲ್ಲಿ ಹಾಕಿದ್ದು ಅದನ್ನು ನಾನು ಓದಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ನನ್ನ ವಾದಪತ್ರದಲ್ಲಿ ದಾವಾ ಆಸ್ತಿ ಐಟಂ ನಂ.1 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ತಿಳಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವಾಗ ತಮಿಳುನಾಡಿಗೆ ಹೋಗಿ ಸೇರಿಕೊಂಡಿದ್ದರು ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನನ್ನ ತಂದೆ ಭೀಮನಹಳ್ಳಿಯಿಂದ ತಮಿಳುನಾಡಿಗೆ ಹೋಗಿ ಬಂದು ಮಾಡುತ್ತಿದ್ದರು ಎಂದು ನುಡಿದಿದ್ದಾರೆ. ನನ್ನ ತಂದೆ ತಮಿಳುನಾಡಿನ ಊಟಿಯಲ್ಲಿ ಇದ್ದರು. ನನ್ನ ತಂದೆ ಭೀಮನಹಳ್ಳಿಯಲ್ಲಿ

ಇರುವಾಗಲೆ ಅವರ ಮದುವೆಯಾಗಿರುತ್ತದೆ. ನಾನು ಹುಟ್ಟಿದ್ದು ಊಟಿಯಲ್ಲಿ. ನನ್ನ ತಂದೆ ಊಟಿಯಲ್ಲಿ ಬಾಂಬೆ ಬರ್ಮಾ ಟ್ರೇಡಿಂಗ್ ಕಾರ್ಪೊರೇಶನ್ ನಲ್ಲಿ ಫಾರ್ಮಸಿಸ್ಟ್ ಆಗಿ ಕೆಲಸ ಮಾಡುತ್ತಿದ್ದರು. ಊಟಿಯಲ್ಲಿ ನನ್ನ ತಂದೆಗೆ ಯಾವುದೇ ಸ್ವಂತ ಜಮೀನು ಅಥವಾ ಮನೆ ಇರಲಿಲ್ಲ. 3ನೇ ಪ್ರತಿವಾದಿ ವಾಸ ಮಾಡುತ್ತಿದ್ದ ಜಾಗ ನನ್ನ ತಂದೆಗೆ ವಿಭಾಗದಲ್ಲಿ ಬಂದಿತ್ತು ಎಂದರೆ ಸರಿ. ಅದು ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತನ್ನು 3ನೆ ಪ್ರತಿವಾದಿ ಈಗ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರಿದು ಸದರಿ ಸ್ವತ್ತಿನಲ್ಲಿ 3ನೆ ಪ್ರತಿವಾದಿಯೆ ವಾಸಿಸುತ್ತಿದ್ದಾರೆ ಎಂದು ನುಡಿದಿದ್ದಾರೆ. ಸದರಿ ಸ್ವತ್ತನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸಾಕ್ಷಿಗೆ ನಿಪಿ 27 ಸರ್ವೆ ನಂ. 94/2 ಎಇ ಪಹಣಿಯನ್ನು ತೋರಿಸಲಾಗಿ ಸದರಿ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ ಎಂದು ನುಡಿದಿದ್ದಾರೆ. ಸದರಿ ಸ್ವತ್ತುನ್ನು  ಕೂಡ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಸ್ವತ್ತು ನನ್ನ ಸ್ವಾಧೀನದಲ್ಲಿ ಇರುತ್ತದೆ ಎಂದು ನುಡಿದಿದ್ದಾರೆ. ನಾನು ಮತ್ತು 3ನೆ ಪ್ರತಿವಾದಿ ಈ ದಾವೆಯನ್ನು ನಾನು ಸಲ್ಲಿಸುವವರೆಗೆ ಚೆನ್ನಾಗಿ ಇದ್ದೆವು ನಂತರದಲ್ಲಿ ನಾವಿಬ್ಬರು ಚೆನ್ನಾಗಿರುವುದಿಲ್ಲ. ನಾನು ಮತ್ತು 3ನೆ ಪ್ರತಿವಾದಿ ಚೆನ್ನಾಗಿ ಇದ್ದರು ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಬೆಳೆಯುವ ಫಸಲುಗಳ ಆದಾಯವನ್ನು ನಾನು ತೆಗೆದುಕೊಳ್ಳುತ್ತಿಲ್ಲ. ದಾವಾ ಆಸ್ತಿಯನ್ನು ನೋಡಲು ನಾನು ಬಂದುಹೋಗುತ್ತಿದ್ದೆ , ಆದರೆ ಅದರ ಫಸಲನ್ನು ಪ್ರತಿವಾದಿ 3 ರವರಿಗೆ ನೀಡಿರುತ್ತೇನೆ.

2. ನ್ನು

3. ತರಗತಿವರೆಗೆ ಓದಿರುತ್ತೇನೆ.  ದೊಡ್ಡಯ್ಯ ತೀರಿಕೊಂಡಿರುತ್ತಾರೆ ಎಂದು ಮತ್ತು ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>**ಮರು ವಿಚಾರಣೆ ಇಲ್ಲ.**</u>

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ